Azadi Ka Amrit Mahotsav

ಕರ್ನಾಟಕಸರ್ಕಾರ

**ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**–560001

ಸಂಖ್ಯೆ:ಸಿ3(4)ನಿ.ಹು.ಅ.ಪ : 10/2023–24 ದಿನಾಂಕ: **06. 04. 2024**

**:: ಅಧಿಕೃತ ಜ್ಞಾಪನ ::**

**ವಿಷಯ** 2023–24ನೇ ಸಾಲಿಗೆ ರಾಜ್ಯದ ಪ್ರಾಥಮಿಕ, ಪ್ರೌಢಶಾಲಾ ಸಹ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ (Specified Post) ಲಿಖಿತ ಪರೀಕ್ಷೆ ನಡೆಸುವ ಮೂಲಕ ಭರ್ತಿ ಮಾಡುವ ಬಗ್ಗೆ :

**ಉಲ್ಲೇಖ**
1. ಕಛೇರಿಯ ಅಧಿಸೂಚನೆ ದಿನಾಂಕ: 16/12/2023 ಮತ್ತು ತಿದ್ದುಪಡಿ ಜಾಪನ ದಿನಾಂಕ: 28/12/2023
2. ಕಛೇರಿಯ ತಿದ್ದುಪಡಿ ಜ್ಞಾಪನಾ ದಿನಾಂಕ: 15/03/2024.
3. ಅಧ್ಯಕ್ಷರು, ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕಾ ಪರಿಷತ್ ಬೆಂಗಳೂರು ಇವರ ಪತ್ರ ಸಂಖ್ಯೆ: ಕೆ3/ಸಿ.ಆರ್.ಪಿ/ಬಿ.ಆರ್.ಪಿ/ಇ.ಸಿ.ಒ/ಗ್ರೂಪ್–ಬಿ/ಲಿ.ಪರೀಕ್ಷೆ/06/2023–24 ದಿನಾಂಕ: 19/03/2024.

----****-----

2023–24ನೇ ಸಾಲಿಗೆ ರಾಜ್ಯದ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಸಹ ಶಿಕ್ಷಕರು ಮತ್ತು ಪ್ರೌಢಶಾಲಾ ಮುಖ್ಯ ಶಿಕ್ಷಕರು, ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ (Specified Post) ಲಿಖಿತ ಪರೀಕ್ಷೆ ನಡೆಸುವ ಮೂಲಕ ಭರ್ತಿ ಮಾಡುವ ಬಗ್ಗೆ ಉಲ್ಲೇಖ–2ರ ಪತ್ರದನ್ವಯ ದಿನಾಂಕ: 15/04/2024 ರಿಂದ 17/04/2024ರವರೆಗೆ ಪರೀಕ್ಷೆ ನಡೆಸಲು ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಅದರೆ ಉಲ್ಲೇಖಿತ–3 ರಲ್ಲಿನ ಅಧ್ಯಕ್ಷರು, ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕಾರ ಪರಿಷತ್ ಬೆಂಗಳೂರು ಇವರ ಪತ್ರದನುಸಾರ ಪ್ರಸ್ತುತ ನಿಗಧಿಪಡಿಸಿರುವ ಪರೀಕ್ಷಾ ರಿಂದ ದಿನಗಳಂದು ಎಸ್.ಎಸ್.ಎಲ್.ಸಿ ಪರೀಕ್ಷಾ ಮೌಲ್ಯಮಾಪನ ಕಾರ್ಯ ನಡೆಯುವುದರಿಂದ ಹಾಗೂ ಶಿಕ್ಷಕರು/ಅಧಿಕಾರಿಗಳನ್ನು ಲೋಕಸಭಾ ಚುನಾವಣಾ ಕಾರ್ಯಕ್ಕೆ ನಿಯೋಜಿಸಲಾಗುತ್ತಿರುವುದರಿಂದ ಆಡಳಿತಾತ್ಮಕ ಹಿತದೃಷ್ಟಿಯಿಂದ ಕೆಳಕಂಡಂತೆ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ (Specified Post) ಲಿಖಿತ ಪರೀಕ್ಷಾ ದಿನಾಂಕಗಳನ್ನು ಮುಂದೂಡಿ ದಿನಾಂಕ: 14/05/2024 ರಿಂದ 16/05/2024ರವರೆಗೆ ನಡೆಸಲು ತೀರ್ಮಾನಿಸಿ ವೇಳಾಪಟ್ಟಿಯನ್ನು ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ. ಉಳಿದಂತೆ ಈಗಾಗಲೇ ಹೊರಡಿಸಲಾಗಿರುವ ಮಾರ್ಗಸೂಚಿ ಅಂಶಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

**: ಪರಿಷ್ಕೃತ ಪರೀಕ್ಷಾ ವೇಳಾಪಟ್ಟಿ :–**

**ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಸಹಶಿಕ್ಷಕರು ಮತ್ತು ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಗಳಿಗೆ.**

| ಕ್ರ. ಸಂ | ವಿವರ | ಕ್ರಮವಹಿಸುವವರು. | ದಿನಾಂಕ ಮತ್ತು ಸಮಯ |
|---|---|---|---|
| 1 | ಪ್ರಶ್ನೆ ಪ್ರತಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ರವಾನಿಸುವುದು. | ನಿರ್ದೇಶಕರು ಕೆ.ಎಸ್.ಇ.ಇ.ಬಿ, ಬೆಂಗಳೂರು. | **09/05/2024** |
| 2 | **ಪ್ರಾಥಮಿಕ & ಪ್ರೌಢ ಶಾಲಾ ಶಿಕ್ಷಕರಿಗೆ ಲಿಖಿತ ಪರೀಕ್ಷೆ 1 (ಪತ್ರಿಕೆ–1)**<br>1. ಸಿ.ಅರ್.ಪಿ, ಬಿ.ಆರ್.ಪಿ, ಮತ್ತು ಶಿಕ್ಷಣ ಸಂಯೋಜಕರು [ಪ್ರಾಥಮಿಕ]<br>2. ಬಿ.ಆರ್.ಪಿ[ಕಲಾ], [ವಿಜ್ಞಾನ], ತಾಂತ್ರಿಕ ಸಹಾಯಕರು ಮತ್ತು ಶಿಕ್ಷಣ ಸಂಯೋಜಕರು [ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **14/05/2024**<br>ಬೆಳಿಗ್ಗೆ 10–30 ರಿಂದ 12–30 ರವರೆಗೆ |

| | | | |
|---|---|---|---|
| 3 | <u>ಲಿಖಿತ ಪರೀಕ್ಷೆ 2 (ಪತ್ರಿಕೆ–2)</u><br>1. ಸಿ.ಆರ್.ಪಿ [ಪ್ರಾಥಮಿಕ]<br>2. ಬಿ.ಆರ್.ಪಿ [ಕಲಾ] & [ವಿಜ್ಞಾನ]–[ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **14/05/2024**<br>ಮಧ್ಯಾಹ್ನ 2–00 ರಿಂದ 04–30 ರವರೆಗೆ |
| 4 | <u>ಲಿಖಿತ ಪರೀಕ್ಷೆ 3 (ಪತ್ರಿಕೆ–2)</u><br>1. ಬಿ.ಆರ್.ಪಿ [ಪ್ರಾಥಮಿಕ]<br>2. ಶಿಕ್ಷಣ ಸಂಯೋಜಕರು [ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **15/05/2024**<br>ಬೆಳಿಗ್ಗೆ 10–30 ರಿಂದ 12–30 ರವರೆಗೆ |
| 5 | <u>ಲಿಖಿತ ಪರೀಕ್ಷೆ 4 (ಪತ್ರಿಕೆ–2)</u><br>1. ಶಿಕ್ಷಣ ಸಂಯೋಜಕರು [ಪ್ರಾಥಮಿಕ]<br>2. ತಾಂತ್ರಿಕ ಸಹಾಯಕರು [ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **15/05/2024**<br>ಮಧ್ಯಾಹ್ನ 2–00 ರಿಂದ 04–30 ರವರೆಗೆ |
| 06 | <u>**ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರ ವೃಂದಕ್ಕೆ**</u><br><u>ಲಿಖಿತ ಪರೀಕ್ಷೆ 1 (ಪತ್ರಿಕೆ–1)</u><br>1. ವಿಷಯ ಪರಿವೀಕ್ಷಕರು.<br>2. ಸಹಾಯಕ ನಿರ್ದೇಶಕರು [ಮ.ಉ.ಯೋಜನೆ],<br>3. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ.<br>4. ಎ.ಪಿ.ಸಿ [ಎಸ್.ಎಸ್.ಎ&ಆರ್.ಎಂ.ಎಸ್.ಎ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **14/05/2024**<br>ಬೆಳಿಗ್ಗೆ 10–30 ರಿಂದ 12–30 ರವರೆಗೆ |
| 07 | <u>ಲಿಖಿತ ಪರೀಕ್ಷೆ–2 (ಪತ್ರಿಕೆ–2)</u><br>1. ವಿಷಯ ಪರಿವೀಕ್ಷಕರು. | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **15/05/2024**<br>ಬೆಳಿಗ್ಗೆ 10–30 ರಿಂದ 12–30 ರವರೆಗೆ |
| 08 | <u>ಲಿಖಿತ ಪರೀಕ್ಷೆ–3 (ಪತ್ರಿಕೆ–2)</u><br>1.ಸಹಾಯಕ ನಿರ್ದೇಶಕರು [ಮಧ್ಯಾಹ್ನ ಉಪಹಾರ ಯೋಜನೆ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **15/05/2024**<br>ಮಧ್ಯಾಹ್ನ 2–00 ರಿಂದ 04–30 ರವರೆಗೆ |
| 09 | <u>ಲಿಖಿತ ಪರೀಕ್ಷೆ–4 (ಪತ್ರಿಕೆ–2)</u><br>1. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ [ಬಿ.ಆರ್.ಸಿ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **16/05/2024**<br>ಬೆಳಿಗ್ಗೆ 10–30 ರಿಂದ 12–30 ರವರೆಗೆ |
| 10 | <u>ಲಿಖಿತ ಪರೀಕ್ಷೆ–5 (ಪತ್ರಿಕೆ–2)</u><br>1. ಎ.ಪಿ.ಸಿ.ಒ [ಎಸ್.ಎಸ್.ಎ & ಆರ್.ಎಂ.ಎಸ್.ಎ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **16/05/2024**<br>ಮಧ್ಯಾಹ್ನ 2–00 ರಿಂದ 04–30 ರವರೆಗೆ |
| 11 | ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಅಂತಿಮ ಫಲಿತಾಂಶ ಪಟ್ಟಿಯನ್ನು ಆಯುಕ್ತರು ಶಾಲಾ ಶಿಕ್ಷಣ ಇಲಾಖೆ. ಬೆಂಗಳೂರು ರವರಿಗೆ ನೀಡುವುದು. | ನಿರ್ದೇಶಕರು ಕೆ.ಎಸ್.ಇ.ಇ.ಬಿ | **28/05/2024** |
| 12 | ಅಭ್ಯರ್ಥಿಗಳ ಸೇವಾನುಭವ ಮತ್ತು ಹೆಚ್ಚಿನ ವಿದ್ಯಾರ್ಹತೆಗೆ ಲಭ್ಯವಾಗುವ ಅಂಕಗಳಿಗೆ ಪರೀಕ್ಷಾ ಫಲಿತಾಂಶದ ಅಂಕಗಳನ್ನು ಕ್ರೂಢೀಕರಿಸಿ **ಎಲ್ಲಾ ವೃಂದದ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಪ್ರಕಟಣೆ**. | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | **30/05/2024** |
| 13 | ತಾತ್ಕಾಲಿಕ ಪಟ್ಟಿಗೆ ಅಭ್ಯರ್ಥಿಗಳಿಂದ ಆಕ್ಷೇಪಣೆ ಸ್ವೀಕರಿಸುವುದು. | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | **30/05/2024**<br>ರಿಂದ **01/06/2024** |
| 14 | ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ವೃಂದದ ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ. ಹಾಗೂ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಆಕ್ಷೇಪಣೆಗಳನ್ನು ಸರಿಪಡಿಸಿದ ನಂತರ ಅರ್ಹ ಪಟ್ಟಿಯನ್ನು ಕ್ರೂಢೀಕರಣಕ್ಕಾಗಿ ಆಯಾ ಆಯುಕ್ತಾಲಯಗಳಿಗೆ ಕಳುಹಿಸುವುದು. | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | **06/06/2024** |
| 15 | ಕ್ರ.ಸಂ.13 ರಂತೆ ಸ್ವೀಕೃತವಾಗಿರುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಜಿಲ್ಲಾ ಹಂತದ ಅಂತಿಮ ಪಟ್ಟಿಗಳನ್ನು ನಿಯಮಾನುಸಾರ ವಿಭಾಗ ಮಟ್ಟಕ್ಕೆ ಕ್ರೋಢೀಕರಣ ಮತ್ತು ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ | 1. ಇ-ಆಡಳಿತ ವತಿಯಿಂದ ಜಿಲ್ಲಾ ಪಟ್ಟಿಗಳನ್ನು ಮೇಲಿನ ಆಧಾರದಲ್ಲಿ ವಿಭಾಗ ಮಟ್ಟದಲ್ಲಿ ತಂತ್ರಾಂಶದಲ್ಲಿ ಕ್ರೋಢೀಕರಣ ಮತ್ತು ಪ್ರಾಧಿಕಾರಿಯವರಿಗೆ ಪ್ರಕಟಣೆಗೆ ಪಟ್ಟಿ ನೀಡುವುದು | **10/06/2024** |

| | | | |
|---|---|---|---|
| | | 2. ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಅಪರ ಆಯುಕ್ತರು ಕಲಬುರಗಿ ಮತ್ತು ಧಾರವಾಡ | |
| 16 | ಎಲ್ಲಾ ವೃಂದದ ಖಾಲಿ ಹುದ್ದೆಗಳ ಪ್ರಕಟಣೆ | ಇ–ಆಡಳಿತ ಘಟಕ. ಆಯುಕ್ತರ ಕಛೇರಿ, ಬೆಂಗಳೂರು | ನಂತರ ಪ್ರಕಟಿಸಲಾಗುವುದು. |
| 17 | ಪ್ರಾಥಮಿಕ, ಪ್ರೌಢ, ಹಾಗೂ ಗ್ರೂಪ್–ಬಿ ವೃಂದದ ಅಧಿಸೂಚಿತ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ನಿಗಧಿಪಡಿಸಿರುವ ಹುದ್ದೆಗಳಿಗೆ ಒಳಬರುವ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್. | 1. ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ವೃಂದದ ಹುದ್ದೆಗಳಿಗೆ ಆಯಾಯ ಜಿಲ್ಲಾ ಉಪನಿರ್ದೇಶಕರು[ಆಡಳಿತ]<br>2. ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳಿಗೆ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು, ಅಪರ ಆಯುಕ್ತರು ಕಲಬುರಗಿ ಮತ್ತು ಧಾರವಾಡ. | ವರ್ಗಾವಣಾ ವೇಳಾಪಟ್ಟಿಯಂತೆ ಕೌನ್ಸಿಲಿಂಗ್ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು. |
| 18 | ನಿರ್ಧಿಷ್ಟಪಡಿಸಿದ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿ ಅಧಿಸೂಚನೆ ಪ್ರಕಟಣೆಯಾದ ದಿನಾಂಕಕ್ಕೆ 5 ವರ್ಷ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಶಾಲೆಗಳಿಗೆ ಸ್ಥಳನಿಯುಕ್ತಿಗೊಳಿಸುವುದು. | | |
| 19 | ಪ್ರಸ್ತುತ ಸರ್ಕಾರದ ಆದೇಶದಂತೆ ತಾಂತ್ರಿಕ ಸಹಾಯಕರ ಹುದ್ದೆಯಲ್ಲಿ ಕರ್ತವ್ಯನಿರತರಿಗೆ ಈ ಬಾರಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿಯವರು ಆಯ್ಕೆಯಾದಲ್ಲಿ ಮಾತ್ರ ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಲು ಅವಕಾಶವಿರುತ್ತದೆ.<br>• ಒಂದು ವೇಳೆ ತಾಂತ್ರಿಕ ಸಹಾಯಕರುಗಳು ಆಯ್ಕೆಯಾಗದಿದ್ದಲ್ಲಿ ಅಂತಹವರುಗಳನ್ನು ಕೌನ್ಸಿಲಿಂಗ್ ಮೂಲಕ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯ ಶಾಲೆಗೆ ಸ್ಥಳ ನಿಯುಕ್ತಿಗೊಳಿಸಲಾಗುವುದು.<br>• ಅಂತಹ ಶಿಕ್ಷಕರು ಜ್ಯೇಷ್ಠತೆ ನಿಯಮಾನುಸಾರ ಆ ಜಿಲ್ಲೆ/ವಿಭಾಗದಲ್ಲಿ ಜ್ಯೇಷ್ಠತೆಯಲ್ಲಿ ಕೊನೆಯ ಸ್ಥಾನವನ್ನು ಪಡೆಯುತ್ತಾರೆ.<br>• ಅದೇ ರೀತಿ ಡಯಟ್‌ಗಳಲ್ಲಿ ಕರ್ತವ್ಯ ನಿರತ ಪ್ರಾಥಮಿಕ/ಪ್ರೌಢ ವಿಭಾಗದ ತಂತ್ರಜ್ಞರು C.R.P B.R.P ಹಾಗೂ E.C.O ಹುದ್ದೆಗಳಿಗೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ. | ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು | ವರ್ಗಾವಣಾ ವೇಳಾಪಟ್ಟಿಯಂತೆ ಕೌನ್ಸಿಲಿಂಗ್ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು. |

20.20.6/2018

**(ಬಿ.ಬಿ. ಕಾವೇರಿ)** ಭಾ.ಆ.ಸೇ
ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ. ಬೆಂಗಳೂರು.

ಇವರಿಗೆ:–

1. ಅಧ್ಯಕ್ಷರು. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ. 6ನೇ ಅಡ್ಡರಸ್ತೆ, ಮಲ್ಲೇಶ್ವರಂ. ಬೆಂಗಳೂರು.
2. ನಿರ್ದೇಶಕರು [ಪರೀಕ್ಷೆಗಳು], ಕೆ.ಎಸ್.ಇ.ಎ.ಬಿ ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ.
4. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಪ್ರಾಂಶುಪಾಲರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ರವರಿಗೆ,
5. ಶಾಲಾಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು :–

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು.
4. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ.
5. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ .

6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
7. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
8. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
9. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
11. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ.
12. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಘಟಕ, ಆಯುಕ್ತರ ಕಛೇರಿ, ಶಾ.ಶಿ.ಇಲಾಖೆ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ.
13. ಹಿರಿಯ ಸಹಾಯಕ ನಿರ್ದೇಶಕರು, ಇಇಡಿಎಸ್ ವಿಭಾಗ, ಆಯುಕ್ತರ ಕಛೇರಿ, ಶಾ.ಶಿ.ಇಲಾಖೆ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ.
14. ಕಛೇರಿ ಪ್ರತಿ.